ದಿನಾಂಕ 08-04-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ ಎಂ.ಎಸ್.ಹೆಚ್ ವಕೀಲರಿಂದಃ**

ದಾವಾ ಆಸ್ತಿಯನುನ ವಹಿವಾಟು ಮಾಡಲು ಪ್ರತಿವಾದಿಯು ತೊಂದರೆ ನೀಡಿದ್ದರಿಂದ ಈ ದಾವೆಯನ್ನು ಸಲ್ಲಿಸಿದ್ದೇನೆ. ದಾವಾ ಆಸ್ತಿಯು 1 ಎಕರೆ 33 ಗುಂಟೆ ವಿಸ್ತೀರ್ಣ ಇದೆ. ದಾವಾ ಆಸ್ತಿಯ ಪೂ- ಖಾಸಿಂ ಸಾಬ ಡೊಳ್ಳೇಶ್ವರ ರವರ ಜಮೀನು, ಪ- ಸರಕಾರಿ ರಸ್ತೆ, ಉ- ಬೈಲಪ್ಪನವರ ಜಮೀನು ದ- ಪ್ರತಿವಾದಿಗೆ ಸೇರಿದ ಜಮೀನುಗಳು ಇವೆ. ಪ್ರತಿವಾದಿಗೆ ಸೇರಿದ ಆಸ್ತಿಯ ಸ ನಂಃ 3/ಬಿ. ಅದು 2 ಎಕರೆ ವಿಸ್ತೀರ್ಣ ಇದೆ. 1990 ರಲ್ಲಿ ನನ್ನ ತಂದೆ ಮತ್ತು ದೊಡ್ಡಪ್ಪ ದಾವಾ ಆಸ್ತಿಯನ್ನು ಹರಾಜಿನಲ್ಲಿ ಖರೀದಿ ಮಾಡಿರುತ್ತಾರೆ. ಸದರಿ ಆಸ್ತಿಯನ್ನು 4 ಲಕ್ಷದ 60 ಸಾವಿರ ರೂಗಳಿಗೆ ಹರಾಜಿನಲ್ಲಿ ಖರೀದಿ ಮಾಡಿರುತ್ತಾರೆ.

2.ದಾವಾ ಆಸ್ತಿಗೆ ಪ್ರಭುದೇವ ರೈಸ್ ಮಿಲ್ ನ ಮಾಲೀಕರಾದ ಮಹಾಲಿಂಗ ಶೆಟ್ಟರ್ ಎಂಬುವವರ ಆಸ್ತಿಯಾಗಿದ್ದು, ಅದನ್ನು ನನ್ನ ತಂದೆ ಮತ್ತು ದೊಡ್ಡಪ್ಪನವರ ಹಾವೇರಿ ಕೆ. ಎಸ್.ಎಫ್.ಸಿ ಅವರಿಂದ ಹರಾಜಿನಲ್ಲಿ ಖರೀಧಿಸಿರುತ್ತಾರೆ. ದಾವಾ ಆಸ್ತಿಯನ್ನು ಕೆ.ಎಸ್.ಎಫ್.ಸಿ ಸಂಸ್ಥೆಯಿಂದ ಖರೀದಿ ಮಾಡಿದ ದಾಖಲೆ ನೊಂದಾಯಿತ ದಾಖಲೆ ಆಗಿರುವುದಿಲ್ಲ. ಸಂಪೂರ್ಣ ಹಣವನ್ನು ನೀಡದೇ ಇರುವುದರಿಂದ ಖರೀದಿ ಹರಾಜಿಗೆ ಸಂಬಂಧಿಸಿದಂತೆ ದಾಖಲೆಯು ನೊಂದಾಯಿಸಿರುವುದಿಲ್ಲ. ಹರಾಜಿನಲ್ಲಿ ದಾವಾ ಆಸ್ತಿಯನ್ನು ಖರೀದಿಸಿದ್ದಕ್ಕೆ ಸಂಬಂದಿಸಿದಂತೆ ಸಂಪೂರ್ಣ ಹಣವನ್ನು ನೀಡಲಾಗಿದೆ. ಹರಾಜು ಹಣವನ್ನು ಸಂಪೂರ್ಣವಾಗಿ ಕಟ್ಟಿದ ಮೇಲೆ ಕೆ.ಎಸ್.ಎಫ್.ಸಿ ಸಂಸ್ಥೆಯವರು ನೊಂದಾಯಿತ ದಾಖಲೆ ಕೊಟ್ಟಿರುವುದಿಲ್ಲ.

3. ಪ್ರತಿವಾದಿಯು ಸ ನಂ: 3/ಬಿ ಆಸ್ತಿಯನ್ನು ಹರಾಜಿನಲ್ಲಿ ತೆಗೆದುಕೊಂಡಿರುತ್ತಾರೆ. ಸದರಿ ಆಸ್ತಿಗೆ ಸಂಬಂಧಿಸಿದಂತೆ ಪ್ರತಿವಾದಿಯ ಹೆಸರಿಗೆ ದಾಖಲೆಗಳು ಇರುತ್ತವೆ. ಸ ನಂ: 3/ಬಿ ಆಸ್ತಿಯನ್ನು ಪ್ರತಿವಾದಿಯು ಹರಾಜಿನಲ್ಲಿ ತೆಗೆದುಕೊಂಡ ದಿನದಂದಲೂ ಸಹ ಅದರ ವಿಸ್ತೀರ್ಣವಾದ 2 ಎಕರೆ ಜಮೀನಿನಲ್ಲಿ ಸ್ವಾದೀನದಲ್ಲಿ ಇರುತ್ತಾರೆ ಎಂದರೆ ಸರಿ. ದಾವಾ ಆಸ್ತಿಯ ವಿಸ್ತೀರ್ಣವಾದ 1 ಎಕರೆ 30 ಗುಂಟೆ ಸಂಪೂರ್ಣ ವಿಸ್ತೀರ್ಣದಲ್ಲಿ ನಾನು ಮಾಲೀಕನಾಗಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಅಸ್ತಿಯು ಇಂದಿಗೂ ಸಹ ಅದರ ಮೂಲ ಮಾಲೀಕರಾದ ಮಹಾಲಿಂಗ ಚಂದ್ರಶೇಖರ ಶೆಟ್ಟರ್ ರವರ ಸ್ವಾಧೀನದಲ್ಲಿಯೇ ಇದೆ ಎಂದರೆ ಸರಿಯಲ್ಲ. ದಾವಾ ಅಸ್ತಿಗೆ ನಾನು ಮಾಲೀಕನಲ್ಲ ಎಂದರೆ ಸರಿಯಲ್ಲ.

4. ಪ್ರತಿವಾದಿಯು ನಾನು ವಾದ ಪತ್ರದಲ್ಲಿ ಬರೆಸಿರುವಂತೆ ತೊಂದರೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗೆ ಸಂಬಂಧಿಸಿದಂತೆ ದಾಖಲೆಗಳನ್ನು ಪಡೆದುಕೊಳ್ಳುವ ಉದ್ದೇಶದಿಂದ ಪ್ರತಿವಾದಿಯ ಮೇಲೆ ಸುಳ್ಳು ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯು ದಾವಾ ಆಸ್ತಿಗೆ ನಾನು ಮಾಲೀಕನಲ್ಲ ಎಂದು ಹೇಳಿರುತ್ತಾರೆ ಎಂದು ಸುಳ್ಳು ಬರೆಸಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಯು ದಾವಾ ಆಸ್ತಿಯ ಕಬ್ಜಾ ಮತ್ತು ವಹಿವಾಟಿಗೆ ನನಗೆ ತೊಂದರೆ ನೀಡಿರುತ್ತಾನೆ ಎಂದು ವಾದ ಪತ್ರದಲ್ಲಿ ಸುಳ್ಳು ಬರೆಸಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.
SD/-

ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ
ಹಾನಗಲ್

**ಸಾಕ್ಷಿಧಾರರ ಸಹಿ**